ಕಂಪನಿಗೆ ಆಗಿರುವ ನಷ್ಟವನ್ನು ಕಡಿಮೆ ಮಾಡಲು ಈ ಕೆಳಗೆ ಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1. ಕಾರ್ಖಾನೆಯ ವಿವಿಧ ಇಲಾಖೆಗಳ ಕಾರ್ಯನಿರ್ವಹಣೆಯನ್ನು ಪದೇ ಪದೇ ಪರಿಶೀಲಿಸಿ ಆದಷ್ಟು ಮಿತವ್ಯಯವನ್ನು ಸಾಧಿಸಿ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸತತವಾಗಿ ಪ್ರಯತ್ನಿಸುತ್ತಿದೆ.

2. ಕಾರ್ಖಾನೆಯಲ್ಲಿ ನವೀನ ರೀತಿಯ ಉತ್ಪಾದನಾ ತಂತ್ರಜ್ಞಾನ, ವಿವಿಧ ಬಗೆಯ (ಹಚ್ಚು ಬೆಲೆ ಬಾಳುವ) ಉಕ್ಕು ತಯಾರಿಕೆ ಹಾಗೂ ಗುಣಮಟ್ಟ ಕಾಪಾಡುವಿಕೆ ಮತ್ತು ಕಚ್ಚಾ ಸಾಮಗ್ರಿಗಳ ಮಿತ ಬಳಕೆ ಮಾಡುವ ದಿಸೆಯಲ್ಲಿ ಕ್ರಮ ಕೈಗೊಂಡಿದೆ.

3. ಕಾರ್ಖಾನೆಯಲ್ಲಿ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ವಿದ್ಯುತ್ ಬಳಕೆಯಲ್ಲಿ ಉಳಿತಾಯ, ಇಂಧನ ಬಳಕೆಯಲ್ಲಿ ಹೊಸವಿಧಾನದಿಂದ ಮಿತವ್ಯಯ ಮತ್ತು ಕೊಂಡುಕೊಳ್ಳುವ ನೀತಿಯನ್ನು ಮಾರ್ಪಾಡು ಮಾಡಲಿದೆ.

4. ವಿವಿಧ ಹಂತದಲ್ಲಿರುವ ಯೋಜನೆಗಳನ್ನು ತ್ವರಿತ ಗತಿಯಲ್ಲಿ ಮುಗಿಸುವ ಕ್ರಮಗಳನ್ನು ಕೈಗೊಂಡಿದ್ದಾರೆ.

ವಿಷಯ : ಕೊಟ್ಟೂರಿನಿಂದ ಹರಿಹರಕ್ಕೆ ರೈಲ್ವೆ ಲೈನು ಹಾಕುವ ಬಗ್ಗೆ.

ಪ್ರ. 143 (93) ಶ್ರೀ ಕೆ. ಚಿನ್ನಬಸವನಗೌಡ (ಕೂಡ್ಲಗಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಕೊಟ್ಟೂರಿನಿಂದ ಹರಿಹರಕ್ಕೆ ರೈಲ್ವೆ ಲೈನನ್ನು ವಿಸ್ತರಿಸುವ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಡನೆ ಪ್ರಸ್ತಾಪಿಸಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

(ಅ) ಹೌದು. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಡನೆ ಇದರ ಬಗ್ಗೆ ವ್ಯವಹರಿಸಲಾಗುವುದು.

Construction of New Tank at Manganahalli, Sira Taluk

144 (5) SRI B. GANGANNA (Kallambella).—Will the Minister for Public Works and Irrigation be pleased to state :—

(*a*) Whether it has come to the notice of Government that the construction of new tank at 'Manganahalli', Bukkapatna Hobli Sira Taluk, is stopped due to the non-release of submergible land though foundation stone was laid ;

(*b*) Whether the present Legislator of Kallambella Constituency has requested the Government to reconsider the issue of releasing of excise lands for taking up this work ;

(*c*) If so, the steps taken by Government in this regard ?

ವಿಷಯ : ಗೋಪಾಲಪುರದ ವೇಸ್ಟ್‌ವೇರ್‌ದ ಹೆಚ್ಚಿನ ನೀರನ್ನು ಹುಲಿಯೂರು ಅಮಾನಿ ಕೆರೆಗೆ ಬದಲಿಸುವುದರ ಕುರಿತಾಗಿ.

ಪ್ರ. 145 (8) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :

(ಅ) ಗೋಪಾಲಪುರದ ವೇಸ್ಟ್‌ವೇರ್‌ದ ಹೆಚ್ಚಿನ ನೀರನ್ನು ಹುಲಿಯೂರು ಅಮಾನಿ ಕೆರೆಗೆ ಒದಗಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆಯೇ ;

(ಬ) ಹುಲಿಯೂರು ಕೆರೆ ಅಚ್ಚುಕಟ್ಟು ನೀರಿಗೋಸ್ಕರ ಯಾವಾಗಲೂ ಬಂಜರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಕ) ಹುಲಿಯೂರು ಅಮಾನಿ ಕೆರೆಗೆ ಸಾಕಷ್ಟು ನೀರನ್ನು ಒದಗಿಸುವುದರ ಕುರಿತಾಗಿ ಸರ್ಕಾರವು ತೆಗೆದುಕೊಂಡ ಕ್ರಮವೇನು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

(ಅ) ಈ ವಿಷಯವಾಗಿ ಯಾವ ಪ್ರಸ್ತಾವನೆಯೂ ಇಲ್ಲ.

(ಬ) ಇಲ್ಲ.

(ಕ) ಈ ಕೆರೆಗೆ ಹೆಚ್ಚಿನ ನೀರು ಪೂರೈಸುವ ಸಾಧ್ಯತೆಯಿಲ್ಲ.

ವಿಷಯ : ನೇತ್ರಾವತಿ ನದಿಯಿಂದ ತುಮಕೂರಿಗೆ ನೀರನ್ನು ಒದಗಿಸುವುದು.

ಪ್ರ. 146 (139) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ನೇತ್ರಾವತಿ ನದಿಯಿಂದ ತುಮಕೂರು ಜಿಲ್ಲೆಗೆ ನೀರು ಒದಗಿಸುವ ಯಾವುದಾದರೂ ಸಲಹೆ ಸರ್ಕಾರದವರ ಮುಂದಿದೆಯೇ ;

(ಆ) ಹಾಗಿದ್ದರೆ, ನೇತ್ರಾವತಿ ನದಿಯ ನೀರಿನಿಂದ ಉಪಯೋಗ ಪಡೆಯುವ ತಾಲ್ಲೂಕುಗಳ ಸಂಖ್ಯೆ ಎಷ್ಟು ;

(ಇ) ಪ್ರತಿ ತಾಲ್ಲೂಕಿನಲ್ಲಿ ಉಪಯೋಗ ಪಡೆಯುವ ಪ್ರದೇಶಗಳ ವಿಸ್ತೀರ್ಣ ಎಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

(ಅ) ಇಲ್ಲ.

(ಆ) ಮೇಲೆ 'ಅ'ನಲ್ಲಿ ನೀಡಿದ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಮೇಲೆ 'ಅ'ನಲ್ಲಿ ನೀಡಿದ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ: ಕರ್ನಾಟಕದ ವಿವಿಧ ತಾಲ್ಲೂಕುಗಳಲ್ಲಿ ಕೈಗಾರಿಕಾ ಶೆಡ್ಡುಗಳನ್ನು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಹಂಚಿರುವ ಬಗ್ಗೆ.

ಪ್ರ. 147 (131) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಕರ್ನಾಟಕದ ವಿವಿಧ ತಾಲ್ಲೂಕುಗಳಲ್ಲಿ ಎಷ್ಟು ಕೈಗಾರಿಕಾ ಕಟ್ಟಡಗಳನ್ನು ಕಟ್ಟಲಾಗಿದೆ ಮತ್ತು ಹಂಚಿಕೆಯಾಗಿದೆ (ತಾಲ್ಲೂಕುವಾರು ವಿವರಗಳನ್ನು ಕೊಡುವುದು) ;

(ಆ) ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಸಣ್ಣ ಪ್ರಮಾಣದ ಉದ್ಯಮಿಗಳಿಗೆ ಕೊಟ್ಟಿರುವ ಅನುಕೂಲತೆಗಳೇನು ;

(ಇ) ಕೈಗಾರಿಕೆಯನ್ನು ಸ್ಥಾಪಿಸಲು ಇರುವ ಅನಾನುಕೂಲತೆಗಳ ಬಗ್ಗೆ ಸಣ್ಣ ಪ್ರಮಾಣದ ಕೈಗಾರಿ ಕೋದ್ಯಮಿಗಳಿಂದ ದೂರುಗಳು ಬಂದಿವೆಯೇ ;

(ಈ) ಹಾಗಿದ್ದಲ್ಲಿ, ಈ ನ್ಯೂನತೆಗಳನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) 2188. ವಿವರ ಪಟ್ಟಿಯನ್ನು ಲಗತ್ತಿಸಲಾಗಿದೆ.

(ಆ) ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲವಾಗುವಂತೆ ರಸ್ತೆ, ದಾರದೀಪಗಳು, ಚರಂಡಿ ವ್ಯವಸ್ಥೆ, ನೀರು ಸರಬರಾಜು, ಬ್ಯಾಂಕಿಂಗ್ ಮತ್ತು ಅಂಚೆಕಛೇರಿಗಳನ್ನೆ ಕೈಗಾರಿಕಾ ವಸಾಹತುಗಳಲ್ಲಿ ಒದಗಿಸಲಾಗಿದೆ.

(ಇ) ಹೌದು. ಹೊಸದಾಗಿ ನಿರ್ಮಿಸಿರುವ ಕೈಗಾರಿಕಾ ವಸಾಹತುಗಳಿಂದ ಬಂದಿವೆ.

(ಈ) ಅನಾನುಕೂಲತೆಗಳ ಬಗ್ಗೆ ದೂರುಗಳು ಬಂದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್‌ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 131 ರ

(ಅ) ಉತ್ತರದ ಅನುಬಂಧ

ಕ್ರಮ ಸಂ.	ಜಿಲ್ಲೆಗಳು	ಶೆಡ್ಡುಗಳನ್ನು ಕಟ್ಟಿ ವಿತರಣೆ ಮಾಡಿರುವುದು
1.	ಬೆಂಗಳೂರು	1084
2.	ಕೋಲಾರ	28
3.	ತುಮಕೂರು	28
4.	ಮಂಡ್ಯ	10
5.	ಮೈಸೂರು	238
6.	ಹಾಸನ	18
7.	ಕೊಡಗು	10
8.	ಶಿವಮೊಗ್ಗ	54
9.	ಚಿಕ್ಕಮಗಳೂರು	16
10.	ದಕ್ಷಿಣ ಕನ್ನಡ	173
11.	ಚಿತ್ರದುರ್ಗ	75
12.	ಧಾರವಾಡ	210
13.	ಉತ್ತರ ಕನ್ನಡ	34
14.	ಬೆಳಗಾಂ	74
15.	ಗುಲ್ಬರ್ಗಾ	40
16.	ರಾಯಚೂರು	18
17.	ಬಿಜಾಪುರ	34
18.	ಬಳ್ಳಾರಿ	22
19.	ಬೀದರ್	22
	ಒಟ್ಟು	2188